**<u>ಸಾಕ್ಷಿಯನ್ನು ದಿನಾಂಕಃ24.09.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ.ಎನ್.ಎಸ್.ಕೆ. ವಕೀಲರಿಂದ:</u>**

ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಪ್ರತಿವಾದಿಗಳು ಅಣ್ಣ ತಮ್ಮಂದಿರಾಗಿದ್ದು, ನನಗೆ ಅಣ್ಣ ತಮ್ಮಂದಿರಾಗಿರುತ್ತಾರೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಎಷ್ಟು ವರ್ಷಗಳಿಂದ ಬೇರೆ ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಸಹೋದರರು 35 ವರ್ಷಗಳಿಂದ ಬೇರೆ ವಾಸವಿದ್ದೇವೆ. ನಮ್ಮ ಚಿಕ್ಕಪ್ಪನ ಮನೆಯ ವ್ಯವಹಾರಕ್ಕೆ ನಾವು ಹೋಗುವುದಿಲ್ಲ, ನಮ್ಮ ಮನೆಯ ವ್ಯವಹಾರಕ್ಕೆ ಅವರು ಬರುವುದಿಲ್ಲ ಎಂದರೆ ಸರಿ. ನಾನು ಮತ್ತು 1ನೇ ಪ್ರತಿವಾದಿ ಮಾತು ಬಿಟ್ಟು 10 ವರ್ಷಗಳಾಗಿವೆ. ಹೀಗೆ ಸಣ್ಣ ಪುಟ್ಟ ವಿಚಾರಗಳಿಗೆ ಮಾತು ಬಿಟ್ಟಿರುತ್ತೇವೆ. ನನ್ನ ತಂದೆಗೂ ನನ್ನ ಚಿಕ್ಕಪ್ಪನಿಗೂ ಅಣಿಯುತ್ತಿರಲಿಲ್ಲ ಎಂದರೆ ಸರಿ. ಹಾಗಾಗಿ 1ನೇ ಪ್ರತಿವಾದಿಯ ಮನೆಯ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಗೊತ್ತು ಎಂದು ನುಡಿಯುತ್ತಾರೆ.

2. ನನ್ನ ಪ್ರಮಾಣ ಪತ್ರಕ್ಕೆ 2ನೇ ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. 2ನೇ ಪ್ರತಿವಾದಿ ಮಾಹಿತಿ ನೀಡಿದ ಕಾರಣ, ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿಗಳ ನಡುವೆ ಯಾವಾಗ ವಿಭಾಗವಾಯಿತು ಯಾವ ಆಸ್ತಿ ಯಾರಿಗೆ ಹೋಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ನಾನು ಸಾಕ್ಷ್ಯ ನುಡಿಯುವ ಬರುವ ಮೊದಲು ಸದರಿ ವಿಭಾಗ ಪತ್ರವನ್ನು ನೋಡಲು ಕೇಳಿರುವುದಿಲ್ಲ. ಸದರಿ ವಿಭಾಗ ಪತ್ರವನ್ನು ನಾನು ನೋಡದ ಕಾರಣ, 1ನೇ

ಪ್ರತಿವಾದಿ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣ ಹೋಗಿದೆ ಎಂದರೆ ಸಾಕ್ಷಿಯು ಸರ್ವೆ ನಂ.22ರಲ್ಲಿ 3 ಎಕರೆ ಹೋಗಿದ್ದು, ಅದು ಒಂದೇ ಆಸ್ತಿ ಇತ್ತು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಬಂದ 3 ಎಕರೆಯ ಚೆಕ್ಕುಬಂದಿ ಪೂರ್ವಕ್ಕೆ ನಮ್ಮ ಜಮೀನು, ಪಶ್ಚಿಮಕ್ಕೆ 1ನೇ ಪ್ರತಿವಾದಿಯ ಜಮೀನು, ಉತ್ತರಕ್ಕೆ ವಾದಿಯ ಜಮೀನು, ದಕ್ಷಿಣಕ್ಕೆ ತೊರೆಹಳ್ಳ. ಈ ಮೇಲೆ ಹೇಳಿದ ಚೆಕ್ಕುಬಂದಿ ಆಸ್ತಿಯಲ್ಲಿ 1ನೇ ಪ್ರತಿವಾದಿ ಬೋರ್ ಹಾಕಿಸಿ, ರೇಷ್ಮೆ ಕಡ್ಡಿ ಬೆಳೆದಿದ್ದಾರೆ ಎಂದರೆ ಸಾಕ್ಷಿಯು ಬೋರ್ ಯಾರು ಹಾಕಿಸಿದ್ದಾರೆ ಎಂದು ಗೊತ್ತಿಲ್ಲ, ಸದರಿ ಆಸ್ತಿಯಲ್ಲಿ ವಾದಿ ಮತ್ತು 1ನೇ ಪ್ರತಿವಾದಿ ಭತ್ತ ಬೆಳೆದಿದ್ದಾರೆ ಎಂದು ನುಡಿಯುತ್ತಾರೆ.

3. ನಾನು ಮೇಲೆ ಹೇಳಿದ ಚೆಕ್ಕುಬಂದಿಯಲ್ಲಿ ನಾನು, ವಾದಿ ಮತ್ತು ಪ್ರತಿವಾದಿಗಳು ಎಲ್ಲರೂ ಸ್ವಾಧೀನದಲ್ಲಿದ್ದೇವೆ. ನಾನು ರಾಗಿ ಭತ್ತ ಬೆಳೆಯುತ್ತೇನೆ. 1ನೇ ಪ್ರತಿವಾದಿಯ ಸಹೋದರಿ ದಾವಾ ಸರ್ವೆ ನಂಬರ್ ಕುರಿತು ದಾವೇ ಹೂಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು 2ನೇ ಪ್ರತಿವಾದಿಯಿಂದ ತಿಳಿದುಕೊಂಡಿರುತ್ತೇನೆ. ಈ ದಾವೇಯನ್ನು 1ನೇ ಪ್ರತಿವಾದಿ ವಾದಿಯ ವಿರುದ್ದ ಹೂಡಿರುತ್ತಾರೆ. ನನಗೆ ಈ ದಾವೇ ಬಗ್ಗೆಯಾಗಲೀ, 1ನೇ ಪ್ರತಿವಾದಿಯ ಮನೆಯ ವಿಚಾರವಾಗಲೀ ಮತ್ತು ದಾವಾ ಆಸ್ತಿಯಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎನ್ನುವ ಕುರಿತಾಗಲೀ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿ ಮತ್ತು 2ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಬಂದಿದ್ದ 3 ಎಕರೆ 20 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದು, ಆತನೇ ಬೆಳೆ ಬೆಳೆಯುತ್ತಿದ್ದಾನೆ ಎಂದರೆ ಸರಿ. ವಾದಿ ಆಸ್ತಿಯನ್ನು ಖರೀದಿ ಮಾಡಿದ ಸಮಯದಿಂದಲೂ

ದಾವಾ ಆಸ್ತಿಯ ಊರಿನಲ್ಲೇ ವಾಸವಿದ್ದಾರೆ. ವಾದಿ ಬೆಂಗಳೂರಿನ ವಾಸಿಯಾಗಿದ್ದರೂ, ಚಿಕ್ಕೋನಹಳ್ಳಿಯಲ್ಲಿ ವಾಸವಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**2ನೇ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.